‘ಚಿತ್ರರಂಗ ಒಂದು ಕುಟುಂಬ ಆಗಿರುವುದರಿಂದ ಇದರ ಬಗ್ಗೆ ನಾನು ಮಾತಾಡುತ್ತಿದ್ದೇನೆ’ ಎಂಬುದು ನಂದಕಿಶೋರ್ ಅವರ ಇನ್ನೊಂದು ಮಾತು. ನಿಜ, ಚಿತ್ರರಂಗವೊಂದು ಕುಟುಂಬ. ಕುಟುಂಬದ ಯಾರಿಗಾದರೂ ನೋವಾದರೆ ಉಳಿದವರು ಸಂತೈಸುವುದು, ಅವರ ಪರವಾಗಿ ನಿಲ್ಲುವುದು, ನೋವುಂಟು ಮಾಡಿದವರ ವಿರುದ್ಧ ಸಿಟ್ಟಿಗೇಳುವುದು ಸಹಜ. ಆದರೆ ಅದರ ಹೊರತಾಗಿಯೂ ಕುಟುಂಬದ ಸದಸ್ಯರಿಗೆ ಇನ್ನೊಂದಿಷ್ಟು ಜವಾಬ್ದಾರಿಗಳಿವೆ. ಕುಟುಂಬದವರು ತಪ್ಪು ದಾರಿ ಹಿಡಿದಾಗ ಹೊರಗಿನವರಿಗಿಂತ ಮೊದಲು ಎಚ್ಚರಿಸಬೇಕಾಗಿದ್ದು ಕುಟುಂಬದವರೇ. ಸಾಕಷ್ಟು ಜನಪ್ರಿಯತೆ ಇರುವ ಸ್ಟಾರ್ ನಟನೊಬ್ಬ ರಮ್ಮಿ ಜಾಹೀರಾತಿನಲ್ಲಿ ಕಾಣಿಸಿಕೊಂಡಾಗ ಅವರ ಸಾಕಷ್ಟು ಅಭಿಮಾನಿಗಳಿಗೆ (ಅಂಧ ಅಭಿಮಾನಿಗಳಲ್ಲ) ಶಾಕ್ ಆಗಿತ್ತು. ಜನರು ತನಗೆ ಕೊಟ್ಟಿರುವ ಪ್ರೀತಿ, ಜನಪ್ರಿಯತೆಯನ್ನು ಸಮಾಜಕಂಟಕರಿಗೆ ಮಾರಿಕೊಳ್ಳುವುದು ತರವೇ ಎಂಬ ಪ್ರಶ್ನೆಯೂ ಹುಟ್ಟಿತ್ತು. ಆಗ ‘ಚಿತ್ರರಂಗ’ದ ಕುಟುಂಬದವರು ಒಬ್ಬರೂ ಮಾತಾಡಿರಲಿಲ್ಲ. ಸುದೀಪ್ ಅವರು ಮಾಡುತ್ತಿರುವುದರಿಂದ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುವುದಷ್ಟೇ ಅಲ್ಲ, ಚಿತ್ರರಂಗ, ನಟರ ‘ಧೀಮಂತ’ ವರ್ಚಸ್ಸು ಮುಕ್ಕಾಗುತ್ತದೆ ಎಂದು ಯಾರೂ ಎಚ್ಚರಿಸಲಿಲ್ಲ. ಇದೇ ಕುಟುಂಬದ ಹೆಣ್ಣುಮಕ್ಕಳು ‘ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ’ ಎಂದು ಹೇಳಿದಾಗ ಹೀಗಾದರೆ ಕುಟುಂಬದ ಮರ್ಯಾದೆ ಹಾಳಾಗುತ್ತದೆ ಎಂದು ಯಾವ ‘ಮೇರು’ ನಟರೂ ಮಾತಾಡಲಿಲ್ಲ ಯಾಕೆ? ಕುಟುಂಬವೆಂದರೆ ಬೆರಳೆಣಿಕೆಯ ಯಜಮಾನರು ಏನು ಮಾಡಿದರೂ ಸಮರ್ಥಿಸಿಕೊಂಡು, ಅವರ ವಿರುದ್ಧ ಯಾರು ಏನೇ ಮಾತಾಡಿದರೂ ಖಂಡಿಸುವ ವ್ಯವಸ್ಥೆಯೇ? ಅದರಿಂದ ಕುಟುಂಬ, ಕುಟುಂಬದ ಸದಸ್ಯರ ಆರೋಗ್ಯಪೂರ್ಣ ಬೆಳವಣಿಗೆ ಸಾಧ್ಯವೇ?

ಇನ್ನೊಂದು ಚೋದ್ಯವೆಂದರೆ ನಂದಕಿಶೋರ್ ತಮ್ಮ ಮಾತಿನಲ್ಲಿ ರಾಜ್‌ಕುಮಾರ್ ಅವರನ್ನೂ ನೆನಪಿಗೆ ತಂದಿರುವುದು. ‘ರಾಜ್‌ಕುಮಾರ್ ಅವರು ಕಲಾಭಿಮಾನಿಗಳನ್ನು ದೇವರು’ ಎಂದು ಹೇಳಿದರು ಎಂದು ಅವರು ನೆನಪಿಸಿಕೊಂಡಿದ್ದಾರೆ. ಆದರೆ ರಾಜ್ ಆ ಮಾತನ್ನು ನಾಲಿಗೆಯಿಂದಷ್ಟೇ ಅಲ್ಲ, ಹೃದಯದಿಂದ ಆಡಿದ್ದರು ಮತ್ತು ತಮ್ಮ ಬದುಕಿನಲ್ಲಿ ಹಾಗೆಯೇ ನಡೆದುಕೊಂಡರು ಎಂಬುದು ಅವರಿಗೆ ಹೊಳೆಯಲಿಲ್ಲವೇಕೆ? ಹೊಳೆದಿದ್ದರೆ, ಸಿಗರೇಟು ಸೇದುವ, ಮದ್ಯಪಾನದ ದೃಶ್ಯಗಳಲ್ಲಿ ನಟಿಸದ, ತಮ್ಮ ಚಿತ್ರಗಳಲ್ಲಿ ಹೆಣ್ಣನ್ನು ಕೀಳಾಗಿ ತೋರಿಸಲು ಎಂದೂ ಒಪ್ಪದ ರಾಜ್‌ಕುಮಾರ್ ಅವರನ್ನು ಇಂದಿನ ‘ಗಡಂಗು’ ನಟರ ಸಮರ್ಥನೆಗೆ ಬಳಸಿಕೊಳ್ಳುತ್ತಿರಲಿಲ್ಲ.

ಕನ್ನಡ ಚಿತ್ರರಂಗದ ಸ್ಟಾರ್‌ಗಳು ಪ್ರಶ್ನೆಗಳಿಗೆ ವಿಮುಖರಾಗಿ ಬಹುಕಾಲವಾಯ್ತು ಬಿಡಿ. ಅವರು ಕೊಟ್ಟ ಉತ್ತರಕ್ಕೆ ತಕ್ಕ ಪ್ರಾಯೋಜಿತ ಪ್ರಶ್ನೆಗಳನ್ನು ರೂಪಿಸಿಕೊಳ್ಳುವ ಕಾಲವಿದು. ಅವೇನೇ ಇದ್ದರೂ ಒಂದು ವಿಷಯಕ್ಕಾಗಿ ನಂದಕಿಶೋರ್ ಅವರಿಗೆ ಧನ್ಯವಾದ ಹೇಳಲೇಬೇಕು.

‘ಕನ್ನಡ ಚಿತ್ರರಂಗದಲ್ಲಿ ಚೇಂಬರ್ ಅನ್ನೋದು ಒಂದಿದೆ’ ಎಂದು ಅವರು ಹೇಳಿದ್ದಾರೆ. ಬಹುತೇಕರಿಗೆ ಮರೆತೇ ಹೋಗಿದ್ದ ವಿಷಯವನ್ನು ಸಾಂದರ್ಭಿಕವಾಗಿಯಾದರೂ ಜ್ಞಾಪಿಸಿದ್ದಕ್ಕೆ ನಂದಕಿಶೋರ್ ಅವರಿಗೆ ಅಭಿನಂದನೆ. ■



# ಮಾಯಾಗಂಗೆಯ ಮೋಡಿ...

ರಾಜಕಾರಣಿ ಜಮೀರ್ ಅಹಮದ್ ಖಾನ್ ಅವರ ಮಗ ಝೈದ್ ಖಾನ್ ನಾಯಕನಾಗಿ ನಟಿಸುತ್ತಿರುವ ಮೊದಲ ಚಿತ್ರ ‘ಬನಾರಸ್’ ಪೂರ್ಣಗೊಂಡು ವರ್ಷಗಳೇ ಕಳೆದಿವೆ. ಕೊರೊನಾ ಸುಳಿಗಳಿಂದ ತಪ್ಪಿಸಿಕೊಂಡು ಚಿತ್ರೀಕರಣ ಮುಗಿಸಿದ, ಜಯತೀರ್ಥ ನಿರ್ದೇಶನದ ಈ ಸಿನಿಮಾ ಹಲವು ಭಾಷೆಗಳಲ್ಲಿ ಬಿಡುಗಡೆ ಆಗುತ್ತದೆ ಎಂಬ ಸುದ್ದಿ ಜೋರಾಗಿಯೇ ಕೇಳಿಸಿತ್ತು. ಆದರೆ ಯಾವಾಗ ಬಿಡುಗಡೆಯಾಗುತ್ತದೆ ಎಂಬ ಪ್ರಶ್ನೆಗೆ ಮಾತ್ರ ಚಿತ್ರತಂಡ ಉತ್ತರ ನೀಡಿರಲಿಲ್ಲ. ಕೊರೊನಾ ತಡೆಗಳೆಲ್ಲ ಮುಗಿದ ಮೇಲೆ ಒಂದರ ಹಿಂದೆ ಇನ್ನೊಂದರಂತೆ ಅಪ್ಪಳಿಸಿದ ದೊಡ್ಡ ದೊಡ್ಡ ಸಿನಿಮಾಗಳ ಅಲೆಗಳ ಅಬ್ಬರ ಮುಗಿಯಲಿ ಎಂದು ಚಿತ್ರತಂಡ ಕಾಯುತ್ತಿತ್ತೇನೋ.

ಇತ್ತೀಚೆಗೆ ‘ಬನಾರಸ್’ ಚಿತ್ರದ ಚಂದದ ಹಾಡೊಂದು ಅದ್ದೂರಿಯಾಗಿಯೇ ಬಿಡುಗಡೆಯಾಗಿದೆ. ವಿ. ನಾಗೇಂದ್ರಪ್ರಸಾದ್ ಬರೆದಿರುವ ‘ಮಾಯಾಗಂಗೆ’ ಎಂಬ ಹಾಡಿನಲ್ಲಿ ನಾಯಕ (ಝೈದ್ ಖಾನ್) ಮತ್ತು ನಾಯಕಿ (ಸೋನಲ್ ಮೊಂತೆರೊ) ನಡುವೆ ಪ್ರೇಮ ಪಲ್ಲವಿಸುವ ಗಳಿಗೆಗಳು ಸುಂದರವಾಗಿಯೇ ಜಾಹೀರಾಗಿವೆ. ಕನ್ನಡ ಹಾಗು ಮಲಯಾಳಂನಲ್ಲಿ ಏಕಕಾಲಕ್ಕೆ ಬಿಡುಗಡೆಯಾದ ಈ ಹಾಡು ನಂತರ ತೆಲುಗು, ತಮಿಳು ಹಾಗೂ ಹಿಂದಿ ಭಾಷೆಗಳಲ್ಲಿಯೂ ಬಿಡುಗಡೆಯಾಗಿದೆ. ಅಜನೀಶ್ ಲೋಕನಾಥ್ ಈ ಹಾಡಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ.

ತಮಿಳು ಭಾಷೆಯಲ್ಲಿ ನಟ ವಿಶಾಲ್, ತೆಲುಗಿನಲ್ಲಿ ಸುಕುಮಾರ್ ಮತ್ತು ಹಿಂದಿಯಲ್ಲಿ ಮಧುರ್ ಭಂಡಾರ್ಕರ್ ಈ ಹಾಡನ್ನು ಬಿಡುಗಡೆ ಮಾಡಿದ್ದಾರೆ. ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಜಯ್ ದತ್ ಹಾಜರಿದ್ದದ್ದು ವಿಶೇಷ.

ಇಷ್ಟು ದಿನ ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದ ಚಿತ್ರತಂಡ ಈಗ ‘ಬನಾರಸ್’ ಅನ್ನು ಸದ್ಯದಲ್ಲಿಯೇ ತೆರೆಗೆ ತರುವ ಆಲೋಚನೆಯಲ್ಲಿ ಇರುವಂತಿದೆ. ಅದರ ಸೂಚನೆಯಾಗಿಯೇ ಮೊದಲ ಹಾಡನ್ನು ಬಿಡುಗಡೆ ಮಾಡಲಾಗಿದೆ. ಸ್ಟಾರ್ ನಟರ ಬಲವಿಲ್ಲದ, ಕಥೆಯ ಹಂದರವನ್ನೇ ನೆಚ್ಚಿರುವ ಕನ್ನಡದ ಸಿನಿಮಾವೊಂದು ಬೇರೆ ಭಾಷೆಗಳಲ್ಲಿಯೂ ಗೆಲುವು ದಾಖಲಿಸಿದರೆ ಖಂಡಿತ ಚಂದನವನದ ಪಾಲಿಗದು ಹೊಸ ಬೆಳಕಾಗುತ್ತದೆ. ■

